# ಕನ್ನಡ ಕಟ್ಟಿದ ಪ್ರತಿಭಾವಂತರು

ಸಂಸ್ಕೃತಿಯ ಬೆಳವಣಿಗೆಯಲ್ಲಿ ಲೇಖಕರ, ಚಿಂತಕರ ಕೊಡುಗೆ ದೊಡ್ಡದಾಗಿರುತ್ತದೆ. ಕನ್ನಡ ಕಾವ್ಯ, ಕತೆ, ವಿಮರ್ಶೆಯ ಎಲ್ಲೆಗಳನ್ನು ವಿಸ್ತರಿಸಿದ ಪ್ರತಿಭಾವಂತರು ಅನೇಕರಿದ್ದಾರೆ. ಅವರೆಲ್ಲರ ಕೆಲಸಗಳು ಏಕಪ್ರಕಾರದವಲ್ಲ. ಅವುಗಳಲ್ಲಿ ಭಿನ್ನತೆ ಇದೆ. ಮತ್ತು ಅವುಗಳಿಗೆ ಅವರವರದೇ ಆದ ಛಾಪಿದೆ, ಸೊಗಡಿದೆ, ಸೊಗಸಿದೆ. ಈ ಸಂಚಿಕೆಯಲ್ಲಿ ಕನ್ನಡದ ನಾಲ್ಕು ಬರಹಗಾರರ ಕೊಡುಗೆ, ಕೆಲಸಗಳನ್ನು ದಾಖಲಿಸುವ ವಿಶೇಷ ಬರಹಗಳಿವೆ. ಇತ್ತೀಚೆಗೆ ನಿಧನರಾದ ಕವಿ ಚೆನ್ನವೀರ ಕಣವಿ ಅವರ ಬದುಕು–ಬರಹವನ್ನು ಆಪ್ತವಾಗಿ ಕಾಣಿಸುವ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಲೇಖನದಲ್ಲಿ ಹಲವು ಬಗೆಯ ಹೊಳಹುಗಳಿವೆ. ಅದರ ಜೊತೆಗೆ ರಹಮತ್ ತರೀಕೆರೆ ಅವರು ಮಾಡಿದ, ಕತೆಗಾರ್ತಿ ಕಸ್ತೂರಿ ಬಾಯರಿ ಅವರ ವಿಶಿಷ್ಟ ನೋಟಗಳನ್ನು ಕಾಣಿಸುವ ಸಂದರ್ಶನವಿದೆ. ನವ್ಯ ಸಾಹಿತ್ಯದ ಪ್ರತಿಭಾಶಾಲಿ ಕಾದಂಬರಿಕಾರ ಶಾಂತಿನಾಥ ದೇಸಾಯಿ ಅವರ ನೆನಪಿನ ಚಿತ್ರವನ್ನು ತಮ್ಮ ಬರಹದಲ್ಲಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಕೊಟ್ಟಿದ್ದಾರೆ. ಕನ್ನಡ ಚಿಂತನೆಯನ್ನು ವಿಸ್ತರಿಸಿದ ವಿಮರ್ಶಕ ಡಿ.ಆರ್. ನಾಗರಾಜ್ ಅವರು ವಿದ್ಯಾರ್ಥಿಯಾಗಿದ್ದಾಗ ಮಾಡಿಕೊಂಡ ಟಿಪ್ಪಣಿಗಳನ್ನು ಆಧರಿಸಿ ಬರೆದ ನಟರಾಜ್ ಹುಳಿಯಾರ್ ಅವರ ಲೇಖನವಿದೆ. ಈ ಬರಹಗಳು ಕನ್ನಡ ಸಾಹಿತ್ಯವನ್ನು ಬೆಳೆಸಿದ ಪ್ರತಿಭಾವಂತರ ಕೆಲಸಗಳನ್ನು ದಾಖಲಿಸುತ್ತವೆ. ಈ ನಾಲ್ವರೂ ಈಗಿಲ್ಲ. ಆದರೆ, ಅವರು ಸೃಷ್ಟಿಸಿದ ಸಾಹಿತ್ಯ–ಚಿಂತನೆಗಳು ಓದುಗರನ್ನು ಮುದಗೊಳಿಸುತ್ತಿವೆ.




ಚೆನ್ನವೀರ ಕಣವಿ, ಶಾಂತಿನಾಥ ದೇಸಾಯಿ




ಡಿ.ಆರ್. ನಾಗರಾಜ್, ಕಸ್ತೂರಿ ಬಾಯರಿ

‘ಈ ದೇಶದ ರಾಜಕೀಯ ಬಹುಸಂಖ್ಯಾತ ಜನಸಮುದಾಯಕ್ಕೆ ತೀರಾ ಅಪ್ರಸ್ತುತ. ಆಳುವ ವರ್ಗ ಶಿಕ್ಷಣ ಪದ್ಧತಿಯ ಮೂಲಕ ವಿದ್ಯಾವಂತರನ್ನು ನಿಷ್ಕ್ರಿಯರನ್ನಾಗಿ ಮಾಡುತ್ತಿರುವುದೇ ಇಲ್ಲಿನ ಲಕ್ಷಣ’ ಎಂದು ಡಿ.ಆರ್. ನಾಗರಾಜ್ ಹೇಳುವ ಮಾತು ತರುಣ ವಿದ್ವಾಂಸನೊಬ್ಬನ ಬೌದ್ಧಿಕ ಸಿದ್ಧತೆಯನ್ನು ಸೂಚಿಸುವಂತಿದೆ. ‘ಪಂಪ, ಕುಮಾರವ್ಯಾಸ ಬರದ ಎಷ್ಟು ವರ್ಷ ಆತು? ಯಾಕವರು ಇಷ್ಟ ಆಗ್ತಾರ? ಯಾಕಂದ್ರ, ಅವರ ಭಾಷೆಯಲ್ಲಿ ಬದುಕಿನ ಒಂದು ಆರ್ದ್ರತೆ ತುಂಬ್ಯದ. ಕುವೆಂಪು, ಬೇಂದ್ರೆ, ಶಿವರುದ್ರಪ್ಪ, ಜಯಂತ ಅವರಲ್ಲೂ ಈ ಆರ್ದ್ರತೆ ಅದ. ಮಣ್ಣು ತಂಪಿದ್ರೆ ಬೀಜ ಮೊಳಕೆ ಒಡೀತಾವ’ ಎನ್ನುವ ಕಸ್ತೂರಿ ಬಾಯರಿ ಬದುಕಿನ ಪಾಠಶಾಲೆಯಲ್ಲಿ ಕಂಡ ಸತ್ಯಗಳನ್ನು ಹೇಳಿದ್ದಾರೆ. ಈ ಬರಹಗಳು ಬದುಕಿನ ಹಲವು ಮಗ್ಗುಲುಗಳನ್ನು ಕಾಣಿಸುತ್ತವೆ; ಅವು ಓದುಗರ ಭಾವಕೋಶವನ್ನು ವಿಸ್ತರಿಸುವಷ್ಟು ಶಕ್ತವಾಗಿವೆ.

ಈ ಸಂಚಿಕೆಯಿಂದ ಕತೆಗಾರ, ಕಾದಂಬರಿಕಾರ ಎಂ.ಎಸ್. ಶ್ರೀರಾಮ್ ಕನ್ನಡೇತರ ಪುಸ್ತಕಗಳ ಜೀವಂತ ಲೋಕವನ್ನು ಪರಿಚಯಿಸುವ ಅಂಕಣ ‘ಪಠಣ ಕುತೂಹಲ’ ಆರಂಭವಾಗುತ್ತಿದೆ. ಬದುಕಿನ ಅನುಭವ, ಸಂವೇದನೆಗಳನ್ನು ಅಭಿವ್ಯಕ್ತಿಸುವ ವಿಮರ್ಶೆ, ಪ್ರಬಂಧ, ಕತೆಗಳು ಎಂದಿನಂತೆ ಈ ಸಂಚಿಕೆಯಲ್ಲಿ ಓದುಗರಿಗೆ ಜೊತೆಯಾಗಲಿವೆ.

**ಮಯೂರ ಬಳಗ**